# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಸಿಡಿ/1804/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 14/02/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ಕೆ.ಸಿ. ಕಾಂತರಾಜು ತಂದೆ ಲೇಟ್ ಬಿ. ಚಿಕ್ಕಮಾದಯ್ಯ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್, ಬಿ.ಡಿ.ಎ., ಆರ್. ಟಿ. ನಗರ ಬೆಂಗಳೂರು ಉತ್ತರ (2) ಶ್ರೀ ಕೆ.ಎಸ್. ಸ್ವಾಮಿ ಬಿನ್ ಲೇಟ್ ಸಿದ್ದಯ್ಯ, ಸಹಾಯಕ ಇಂಜನೀಯರ್, ಬಿ.ಡಿ.ಎ., ಆರ್. ಟಿ. ನಗರ, ಬೆಂಗಳೂರು ಉತ್ತರ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗ ಇವರು ಬೆಂಗಳೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ (1) ಶ್ರೀ ಕೆ.ಸಿ. ಕಾಂತರಾಜು ತಂದೆ ಲೇಟ್ ಬಿ. ಚಿಕ್ಕಮಾದಯ್ಯ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್, ಬಿ.ಡಿ.ಎ., ಆರ್. ಟಿ. ನಗರ ಬೆಂಗಳೂರು ಉತ್ತರ (2) ಶ್ರೀ ಕೆ.ಎಸ್. ಸ್ವಾಮಿ ಬಿನ್ ಲೇಟ್ ಸಿದ್ದಯ್ಯ, ಸಹಾಯಕ ಇಂಜನೀಯರ್, ಬಿ.ಡಿ.ಎ., ಆರ್. ಟಿ. ನಗರ, ಬೆಂಗಳೂರು ಉತ್ತರ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀಮತಿ ರಾಧಾ ಕೋಂ ರಮೇಶ, 128/1, ಕೆ. ನಾರಾಯಣಪುರ, ಅರ್ಕಾವತಿ ಲೇಔಟ್, ಕೊತ್ತನೂರು ಪೋಸ್ಟ್, ಬೆಂಗಳೂರು-77 (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>**ದೂರಿನ ಸಂಕ್ಷಿಪ್ತ ವಿವರಣೆ:-**</u> ದೂರುದಾರರ ಮಾವನವರಾದ ಶ್ರೀ ಕೃಷ್ಣಪ್ಪ ಇವರ ಹೆಸರಿನಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರ ಹೋಬಳಿ ಕೆ. ನಾರಾಯಣಪುರ ಗ್ರಾಮದಲ್ಲಿರುವ ಸರ್ವೆ ನಂ. 16 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ಬಿ.ಡಿ.ಎ ಸ್ವಾಧೀನಪಡಿಸಿಕೊಂಡಿದ್ದು ಅದರಲ್ಲಿ 8ವರೆ ಗುಂಟೆ ಜಮೀನಿಗೆ ಎನ್.ಒ.ಸಿ. ನೀಡಿದ್ದು, ಸರ್ವೆ ಸ್ಕೆಚ್‌ನಲ್ಲಿ ತಪ್ಪಾಗಿ ಸ್ಕೆಚ್‌ನ್ನು ನಮೂದಿಸಿದ್ದು, ಈ ಸಂಬಂಧ ಸದರಿ 8 ವರೆ ಗುಂಟೆ ಜಮೀನನ್ನು ಸ್ಥಳ ಪರಿಶೀಲಿಸಿ, ಅಳತೆ ಮಾಡಿ ತಮ್ಮ ಮಾವನವರ ಸ್ವಾಧೀನಕ್ಕೆ ಬಿಟ್ಟುಕೊಡುವಂತೆ ಕೋರಿ ಬಿ.ಡಿ.ಎ., ಆರ್. ಟಿ. ನಗರದ ಕಛೇರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೆಲಸಕ್ಕಾಗಿ 1 ನೇ ಎದುರುದಾರರು ದೂರುದಾರರೊಂದಿಗೆ ಮಾತನಾಡಿದಾಗ ರೂ. 3,00,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಹಣವನ್ನು 2ನೇ ಎದುರುದಾರರನ್ನು ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ "ಹಣ ನೀಡಿದ ಕೂಡಲೇ ನಿಮ್ಮ ಕಡತವನ್ನು ಅಲಾಟ್‌ಮೆಂಟ್ ಶಾಖೆಗೆ ಕಳುಹಿಸಿಕೊಡಲಾಗುತ್ತದೆ" ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರಿಗೆ ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಬೆಂಗಳೂರು ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು 11/07/2017 ರಂದು ನೀಡಿರುತ್ತಾರೆ. ಈ ಬಗ್ಗೆ ಬೆಂಗಳೂರು ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 28/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 11/07/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಪೀಕರಣ ಮಾಡಿ ಅದನ್ನು ಸಿ.ಡಿ.ಗೆ ವರ್ಗಾಯಿಸಿರುತ್ತಾರೆ. ನಂತರ ಲಂಚದ ಹಣ ರೂ. 1,50,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ, ಸದರಿ ದ್ರಾವಣದಲ್ಲಿ ನೋಟುಗಳಿಗೆ

ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಯನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಶ್ರೀಮತಿ ಸುಮಂಗಳಾ ಕೋಂ ವಿ. ಕೃಷ್ಣಪ್ಪ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರನ್ನು ನೀಡಿದ್ದು ಅದನ್ನು ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕರವಸ್ತ್ರದಿಂದ ಬಾಯಿಯನ್ನು ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 11/07/2017 ರಂದು ದೂರುದಾರರು ನೆರಳು ಸಾಕ್ಷಿ ಶ್ರೀಮತಿ ಸುಮಂಗಳಾ ಕೋಂ ವಿ. ಕೃಷ್ಣಪ್ಪ ರವರೊಂದಿಗೆ 2ನೇ ಎದುರುದಾರರ ಕೊಠಡಿಗೆ ಹೋಗಿ ವಿಚಾರಿಸಿದಾಗ ಅಲ್ಲಿ ಯಾರೋ ಒಬ್ಬ ವ್ಯಕ್ತಿ ಬಂದಿದ್ದು 2ನೇ ಎದುರುದಾರರು ದೂರುದಾರರಿಗೆ ಒಂದು ಚೀಟಿಯಲ್ಲಿ ಸಿ.ಎನ್. 98344 ಎಂದು ಬರೆದುಕೊಟ್ಟು ಕೊಠಡಿಯಲ್ಲಿದ್ದ ವ್ಯಕ್ತಿಯನ್ನು ತೋರಿಸಿ 1ನೇ ಎದುರುದಾರರು "ಹಣವನ್ನು ಅವರಿಗೆ ಕೊಡಿ, ಅವರೇ ಹೆಡ್ ಆಫೀಸಿನಲ್ಲಿ ನಿಮ್ಮ ಮುಂದಿನ ಕೆಲಸವನ್ನು ಮಾಡುತ್ತಾರೆ" ಎಂದು ಹೇಳಿರುತ್ತಾರೆ. ಸದರಿ ಆ ವ್ಯಕ್ತಿಯ ಜೊತೆ ಹೊರಗೆ ಬಂದಿದ್ದು ಕಾಂಪ್ಲೆಕ್ಸಿನ ಎದುರುಗಡೆ ಒಂದು ಮರ ತೋರಿಸಿ "ನೀವು ಕೆಳಗಡೆ ನಿಂತುಕೊಂಡಿರಿ

ಬರುತ್ತೇನೆ"ಎಂದು ಹೇಳಿದರು. ನಂತರ ಕಾಂಪ್ಲೆಕ್ಸಿನ ಕಂಪೌಂಡಿನಿಂದ ಹೊರ ಬಂದು ಮರದ ಕೆಳಗಡೆ ಅರ್ಧ ಗಂಟೆ ಕಳೆದರೂ ಆ ವ್ಯಕ್ತಿ ಬರಲೇ ಇಲ್ಲ, ಪುನ: ಕಛೇರಿಗೆ ಹೋಗಿ ಸೆಕ್ಯುರಿಟಿಯನ್ನು ವಿಚಾರಿಸಲಾಗಿ 2ನೇ ಎದುರುದಾರರು ಸ್ವಲ್ಪ ಹೊತ್ತಿನಲ್ಲಿ ಹೊರಟು ಹೋದರು ಮತ್ತು ಅವರಿಗೆ ಮೊಬೈಲ್ ಕರೆ ಮಾಡಿದ್ದು ಅದನ್ನು ಸ್ವೀಕರಿಸಲಿಲ್ಲ. 1ನೇ ಎದುರುದಾರರಿಗೆ ಫೋನ್ ಮಾಡಿದಾಗ ಅವರು ಹೊರಟು ಹೋಗಿರುವ ಬಗ್ಗೆ ಹೇಳಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳು ಸವಿಸ್ತಾರ ಪಂಚನಾಮೆ ಜರುಗಿಸಿರುತ್ತಾರೆ.

5) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, 1 ಮತ್ತು 2ನೇ ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

6) 1 ಮತ್ತು 2ನೇ ಎದುರುದಾರರು ನ್ಯಾಯಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. 1 ಮತ್ತು 2ನೇ ಎದುರುದಾರರು ದೂರುದಾರರೊಂದಿಗೆ ಲಂಚದ ಹಣವನ್ನು ಬೇಡಿಕೆ ಇಟ್ಟ ಬಗ್ಗೆ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡ್ ಮಾಡಿಕೊಂಡಿದ್ದು ತನಿಖಾಧಿಕಾರಿಗಳು ಸದರಿ ವಾಯ್ಸ್ ರೆಕಾರ್ಡರನ್ನು ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರಿಗೆ ಕಳುಹಿಸಿ ವರದಿಯನ್ನು ಪರಿಶೀಲಿಸಿದಾಗ ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು 1ನೇ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ. 2ನೇ ಎದುರುದಾರರು ಕೈ ಬರವಣಿಗೆಯಲ್ಲಿ ನೀಡಿದ ಚೀಟಿ ಸಿ.ಎನ್. 98344 ಹೋಲಿಕೆಯ ಅಭಿಪ್ರಾಯದ ವರದಿಯು ಬೆಂಗಳೂರು ರಾಸಾಯನಿಕ ತಜ್ಞರಿಂದ ಬರುವುದು ಬಾಕಿ ಇರುತ್ತದೆ.

7) ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು 1ನೇ ಎದುರುದಾರರು ದಿನಾಂಕ 18/10/2021 ರಂದು ಮತ್ತು 2ನೇ ಎದುರುದಾರರು ದಿನಾಂಕ 12/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ ಸದರಿಯವರು ತಮ್ಮ ಸಮಜಾಯಿಷಿಗಳಲ್ಲಿ ಪ್ರಕರಣದ ಸಂಪೂರ್ಣ ವಿಷಯವನ್ನು ನಿರಾಕರಿಸಿರುತ್ತಾರೆ ಮತ್ತು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಲೋಪವಾಗಿರುವುದಿಲ್ಲ ಮತ್ತು ದೂರುದಾರರ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವಿಳಂಬ ನೀತಿಯನ್ನು ಅನುಸರಿಸದೆ ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಂಡು ಮುಂದಿನ ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ಕಡತ ಸಲ್ಲಿಸಿದ್ದೇವೆ ಹಾಗೂ ಯಾವುದೇ

ಅಧಿಕಾರ ದುರುಪಯೋಗ ಮತ್ತು ಕರ್ತವ್ಯ ಲೋಪ ಆಗಿರುವುದಿಲ್ಲವೆಂದು ಸಮಜಾಯಿಷಿ ನೀಡಿರುತ್ತಾರೆ. 1ನೇ ಎದುರುದಾರರು ದಿನಾಂಕ 23/06/2017 ರಂದು ಸಹಾಯಕ ಕಾರ್ಯಪಾಲಕ ಇಂಜನೀಯರ್ ಕರ್ತವ್ಯದಿಂದ ಬಿಡುಗಡೆ ಹೊಂದಿರುವುದಾಗಿ ಸಮಜಾಯಿಷಿ ನೀಡಿರುತ್ತಾರೆ. ಆದರೆ 1 ನೇ ಎದುರುದಾರರು ಅದೇ ಕಛೇರಿಯಲ್ಲಿ ಕಾರ್ಯ ನಿರ್ವಹಿಸಿರುವುದು ಕಂಡುಬರುತ್ತದೆ. ಹಾಗೂ ಅವರಿಗೆ ಸ್ಥಳ ನಿಯುಕ್ತಿಗೊಳಿಸಿರುವುದು ಅವರು ಸಲ್ಲಿಸಿರುವ ದಾಖಲಾತಿಯಿಂದ ಕಂಡುಬರುವುದಿಲ್ಲ. 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

8) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲು [redacted] ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

10) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.